'ಸ್ತ್ರೀಶಕ್ತಿ' ಎಂಬ ಹೊಸ ಯೋಜನೆಯನ್ನು ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ . ಅದಕ್ಕೆ ಅನುಗುಣವಾಗಿ ಒಂದು ವಿಧವಾದ ವಿಶೇಷವಾದ ಪ್ಯಾಕೇಜನ್ನು ಅಲ್ಲಿನ ಹೆಣ್ಣು ಮಕ್ಕಳಿಗೆ, ವಿಶೇಷವಾಗಿ ಪುನರ್ವಸತಿ ಕೇಂದ್ರಗಳಲ್ಲಿ ವಾಸ ಮಾಡುವ ನಿರ್ಗತಿಕ ಹೆಣ್ಣು ಮಕ್ಕಳಿಗೆ ಇಂತಿಷ್ಟು ಪರಿಹಾರ ನೀಡಲಾಗುವುದು ಎಂದು ಘೋಷಣೆ ಮಾಡಲು ಸರ್ಕಾರ ಸಿದ್ಧವಿದೆಯೆ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ವಿಶ್ವ ಆಹಾರ ಯೋಜನೆಯಡಿಯಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ಬೇಕಾದರಿಗೆ ಮತ್ತು ರೇಷ್ಮೆ ಸೂಲು ತೆಗೆಯುವುದು, ಕಸೂತಿ ಕೆಲಸವನ್ನು ಹೆಣ್ಣು ಮಕ್ಕಳಿಗೆ ನೀಡಲಾಗುತ್ತಿದೆ . ಇಲ್ಲಿವರೆಗೆ 5500 ಅರ್ಹ ಸಂಕಷ್ಟದಲ್ಲಿರುವ, ಕುಟುಂಬದವರಿಗೆ ಪರಿಹಾರವನ್ನು ನೀಡಲಾಗಿದೆ.

ಶ್ರೀ ಎ. ಆರ್. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಮೀನುಗಾರಿಕಾ ಸಚಿವರಲ್ಲಿ ನನ್ನ ಕ್ಷೇತ್ರದ ನಂಜನಗೂಡು ತಾಲ್ಲೂಕಿನಲ್ಲಿನ ಹಳೇಪುರ ಗ್ರಾಮದಲ್ಲಿ ಗುಂಪುಮನೆ ಮಂಜೂರಾಗಿದೆಯೆ ಎಂದು ಪ್ರಶ್ನೆ ಕೇಳಿದ್ದೆ. ಅದು ಉಪಯೋಗಿ ಮಸತಿ ಇಲಾಖೆಗೆ ಬಂದುಬಿಟ್ಟಿದೆ . ಆದ್ದರಿಂದ ಈ ಪ್ರಶ್ನೆಯನ್ನು ಮೀನುಗಾರಿಕೆ ಇಲಾಖೆಗೆ ವರ್ಗಾವಣೆ ಮಾಡಿ ಉತ್ತರವನ್ನು ತರಿಸಿಕೊಡಬೇಕಾಗಿ ವಿನಂತಿಸುವೆ .

ಅಧ್ಯಕ್ಷರು : ಆಗಬಹುದು.

ಎ. ಪಿ. ಎಂ. ಸಿ. ಮೂಲಕ ರೈತರಿಗೆ ಋಣಸಂದಾಯ

141 (1432) ಶ್ರೀ ಪಿ. ಜಿ. ಆರ್. ಸಿಂಧ್ಯ (ಶನಕಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆ ಸಂಸ್ಥೆಗಳ ಬಸ್ ಪ್ರಯಾಣ ದರವನ್ನು ಏರಿಸಿರುವ ಪ್ರಮಾಣ ಎಷ್ಟು ?

ಆ) ಇದರಿಂದ ಸಂಸ್ಥೆಗಳಿಗೆ ಬರಬೇಕಾದ ನಿರೀಕ್ಷಿತ ಹಣ ಎಷ್ಟು ?

ಇ) ನಿರೀಕ್ಷಿಸಿದ ಪ್ರಮಾಣದಲ್ಲಿ ಹಣ ಬಂದಿದೆಯೆಷ್ಟೋ?

ಈ) ಬಂದಿದ್ದಲ್ಲಿ ಎಷ್ಟು ಹಣ ಬಂದಿದೆ : ಮೂರು ನಿಗಮಗಳ ವಿವರಗಳನ್ನು ನೀಡುವುದು?

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ದಿನಾಂಕ: 5- 11-99ರಿಂದ ಗ್ರಾಮಾಂತರ ಸೇವೆಗಾಗಿ ಶೇಕಡಾ 15. 3ರಷ್ಟು, ನಗರ ಸೇವೆಗಾಗಿ ಶೇಕಡಾ 19 ರಷ್ಟು ಪ್ರಯಾಣಿಕರ ಪ್ರಯಾಣ ದರಗಳನ್ನು ಹೆಚ್ಚಿಸಲಾಗಿದೆ.

ಆ) ಈ ಪ್ರಯಾಣ ದರಗಳ ಹೆಚ್ಚಳದಿಂದ ವಾರ್ಷಿಕವಾಗಿ ಸಾರಿಗೆ ಆದಾಯದಲ್ಲಿ ಹೆಚ್ಚಳವಾಗಬಹುದಾದ ವಿವರಗಳು ಈ ಕೆಳಕಂಡಂತಿವೆ.

ಕ.ರಾ.ರ.ಸಾ.ಸಂಸ್ಥೆ ರೂ.6453.24 ಲಕ್ಷ

ವಾ.ಕ.ರ.ಸಾ. ನಿಗಮ ರೂ.3615.81 ಲಕ್ಷ

ಬೆಂ.ಮ.ನ.ಸಾ.ನಿಗಮ ರೂ.2644.46 ಲಕ್ಷ

ಇ) ಬಹುಮಟ್ಟಿಗೆ ಹೆಚ್ಚಾಗಿದೆ.

ಈ) ಇಲ್ಲಿಯವರೆಗೆ ಉಂಟಾದ ಹೆಚ್ಚಿನ ಆದಾಯದ ವಿವರಗಳು ಈ ಕೆಳಕಂಡಂತಿದೆ.

ಕ.ರಾ.ರ.ಸಾ.ಸಂಸ್ಥೆ ರೂ.2589.42 ಲಕ್ಷಗಳು

ವಾ.ಕ.ರ.ಸಾ. ನಿಗಮ ರೂ.1410.98 ಲಕ್ಷಗಳು

ಬೆಂ.ಮ.ನ.ಸಾ.ನಿಗಮ ರೂ.1165.31 ಲಕ್ಷಗಳು

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ . ಆದರೆ ಇದರಲ್ಲಿ ಪರ್‌ಸೆಂಟ್‌ಜ್ ಆಫ್ ರಿಯಲೈಜೇಷನ್ ಎಂಬುದನ್ನು ಹೇಳಿಲ್ಲ. ತಾವು ತಮ್ಮ ಉತ್ತರದಲ್ಲಿ ಶೇಕಡ 15.3 ಗ್ರಾಮಾಂತರ ಪ್ರದೇಶಕ್ಕೆ, 19 ಪರ್‌ಸೆಂಟ್ ನಗರ ಪ್ರದೇಶದಲ್ಲಿ ಎಂದು ಹೇಳಿದ್ದೀರಿ. ದಯಮಾಡಿ ಪರ್‌ಸೆಂಟೇಜ್ ಆಫ್ ರಿಯಲೈಜೇಷನ್ ಎಷ್ಟು ಎಂದು ಹೇಳಬೇಕು. ಎರಡನೆಯದಾಗಿ ನಿರೀಕ್ಷಿಸಿದ ಪ್ರಮಾಣದಲ್ಲಿ ಹಣ ಬಂದಿದೆಯೆ ಎಂಬುದಕ್ಕೆ ಬಹುಮಟ್ಟಿಗೆ ಹೆಚ್ಚಾಗಿದೆಯೆಂದು ಹೇಳಿದ್ದೀರಿ. ಈ ರೀತಿಯಾದ ಉತ್ತರವನ್ನು ಬಾಕಿ ಸಂದರ್ಭದಲ್ಲಿ ಕೊಡಬಹುದು. ಆದರೆ ಪ್ರಶ್ನೋತ್ತರ ಸಂದರ್ಭದಲ್ಲಿ ಖಚಿತವಾದ ಉತ್ತರವನ್ನು ಬಾಕಿ ಸಂದರ್ಭದಲ್ಲಿ ಕೊಡಬೇಕು ಎಂಬುದು ತಮಗೆ ಗೊತ್ತಿದೆ. ಬಹುಮಟ್ಟಿಗೆ ಎಂದರೆ ಎಷ್ಟು ಪರ್‌ಸೆಂಟ್ ಎಂಬ ಬಗ್ಗೆ ದಯಮಾಡಿ ಹೇಳಬೇಕು. ಈ ವರ್ಷದ ಬಜೆಟ್‌ನಲ್ಲಿ ಮತ್ತೆ ದರಗಳನ್ನು ಹೆಚ್ಚು ಮಾಡುವ ಬಗ್ಗೆ ಆಂತರಿಕವಾಗಿ ಮುಖ್ಯಮಂತ್ರಿಯವರು ಹೇಳಿದ್ದಾರೆ . ಆ ರೀತಿ ಕೆ.ಎಸ್.ಆರ್.ಟಿ.ಸಿ. ಬಸ್‌ನ ದರವನ್ನು ಜಾಸ್ತಿ ಮಾಡುವುದಿದ್ದರೆ ಎಷ್ಟು ಮಾಡಿತ್ತೀರಿ ? ಯಾವಾಗ ಮಾಡುತ್ತೀರಿ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಸಾರಿಗೆ ಸಚಿವರಾಗಿದ್ದವರು, ಹಿರಿಯ ಸಚಿವರು ಸಹ. ಅವರ ಮಾರ್ಗದರ್ಶನದಲ್ಲಿ ನಾನು ಇದುವರೆಗೆ ಮುಂದುವರೆದಿದ್ದೇನೆ, ಅನೇಕ ಪತ್ರಿಕೆಗಳಲ್ಲಿ ನಾನು ಈ ಮಾತನ್ನು ಹೇಳಿದ್ದೇನೆ . ಬಸ್ ದರವನ್ನು ಗ್ರಾಮಾಂತರ ಪ್ರದೇಶಗಳಲ್ಲಿ 15.3 ಪರ್‌ಸೆಂಟ್ ನಗರ ಪ್ರದೇಶಗಳಲ್ಲಿ 19 ಪರ್‌ಸೆಂಟ್‌ನಷ್ಟು ಜಾಸ್ತಿ ಮಾಡಿದ್ದೇವೆ . ಇದರಿಂದ ಬಂದಿರುವ ಆದಾಯದ ಬಗ್ಗೆ ಸಹ ಉತ್ತರದಲ್ಲಿ ಮಾಹಿತಿಯನ್ನು ನೀಡಿದ್ದೇವೆ. 5-11-99ರಿಂದ ಜಾಸ್ತಿ ಮಾಡಿರುವ ದರದಂತೆ ಕಳೆದ ನಾಲ್ಕು ತಿಂಗಳಿನಲ್ಲಿ ಬಂದಿರುವ ಹಣದ ಬಗ್ಗೆ ತಮ್ಮ ತಿಳುವಳಿಕೆಗೆ ತಂದಿದ್ದೇವೆ. ಆದರೆ ಸ್ವಲ್ಪ ಹೆಚ್ಚಾಗಿಯೇ ಹಣ ಬಂದಿದೆಯೆಂದು ತಮ್ಮ ತಿಳುವಳಿಕೆಗೆ ತಂದಿದ್ದೇವೆ. ಮೂರು ಸಾರಿಗೆ ಸಂಸ್ಥೆಗಳಿಂದ 89 ಲಕ್ಷ ಕಿಲೋಮೀಟರ್ ಹೆಚ್ಚಾಗಿ ಬಸ್ಸುಗಳನ್ನು ಓಡಿಸಿದ್ದೇವೆ. ಆದರಿಂದ ಬಂದಿರುವ ಆದಾಯವನ್ನು ಲೆಕ್ಕ ಹಾಕಿಕೊಂಡರೆ 10 ಕೋಟಿ ರೂಪಾಯಿಗಳಿಗಿಂತ ಮೀರಿ ನಮಗೆ ಆದಾಯ ಬಂದಿದೆ . ಈ ಹತ್ತು

ಕೋಟಿ ರೂಪಾಯಿಗಳು ಮತ್ತು ದರವನ್ನು ಹೆಚ್ಚು ಮಾಡಿದ ನಂತರ ನಾಲ್ಕು ತಿಂಗಳಿನಲ್ಲಿ ಬಂದಿರುವ ಹಣವನ್ನು ಸೇರಿಸಿದರೆ ಈ ಅವಧಿಯಲ್ಲಿ ನಮಗೆ 51 ಕೋಟಿ ಆದಾಯ ಸಂಗ್ರಹವಾಗಿದೆಯೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಮಗೆ ಮಿಸ್ ಲೀಡ್ ಆಗತಕ್ಕದ್ದು ಇಲ್ಲೇ. ಟ್ರಾಫಿಕ್ ಸೆಕ್ಷನ್ ಏನಿದೆ ಅದರಲ್ಲಿ ಪರ್‌ಸೆಂಟೇಜ್ ಆಫ್ ರಿಯಲೈಜೇಷನ್ ಬಹಳ ಮುಖ್ಯವಾದುದು. ಇದನ್ನು ತಾವು ದಯಮಾಡಿ ತಿಳಿದುಕೊಳ್ಳಿ. ಕ್ಯಾನ್ಸಲೇಷನ್, ಹೆಚ್ಚು ಕಿಲೋಮೀಟರ್ ಓಡಿಸತಕ್ಕದ್ದು, ಎಕ್ಸಟೆನೆಷನ್ ಮಾಡತಕ್ಕದ್ದು ಇವುಗಳೆಲ್ಲ ಇದೆ. What is the traffic percentage of realisation? 15.9 ಪರ್‌ಸೆಂಟ್ ಗ್ರಾಮಾಂತರ ಪ್ರದೇಶಕ್ಕೆ, ನಗರ ಪ್ರದೇಶಕ್ಕೆ 19 ಪರ್‌ಸೆಂಟ್ ಮಾಡಲು ಈ ಸದನದಲ್ಲಿ ಒಪ್ಪಿಗೆಕೊಟ್ಟಿವು .What is the percentage of realisation? This is Question number one. It is not the cash ; it is not the volume. It is the percentage of increase: How much? ಏಕೆಂದರೆ ಕ್ಯಾನ್ಸಲೇಷನ್ ಜಾಸ್ತಿಯಾಗಿದೆ. ಸೋರಿಕೆಯ ಪ್ರಮಾಣ ಕಡಿಮೆಯಾಗಿಲ್ಲ. ಅದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಅದಕ್ಕಾಗಿ What is the percentage os realisation ? ಎಂದು ನಾನು ಕೇಳುತ್ತಿರುವುದು. ಎರಡನೆಯದಾಗಿ, ಇದು ಆಟಾನಮಸ್, ಕಮರ್ಶಿಯಲ್ ಆರ್ಗನೈಜೇಷನ್ ರೀತಿ ಕಾರ್ಯನಿರ್ವಹಿಸಬೇಕು ಎಂದು ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತೆ ದರಗಳನ್ನು ಯಾವಾಗ ಜಾಸ್ತಿ ಮಾಡುತ್ತೀರಾ ಎಂಬುದನ್ನು ಕೇಳುತ್ತಿದ್ದೇನೆ.

ಶ್ರೀ .ಸಿ. ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ರಿಯಲೈಜೇಷನ್ ಬಗ್ಗೆ ಈ ಹಿಂದೆ ನಾವು ಲೆಕ್ಕಾಚಾರ ಮಾಡಿದಂತೆ ಹಾಲಿ ಇರುವ ದರ ಪ್ರತಿ ಕಿಲೋಮೀಟರ್‌ಗೆ 21 ಪೈಸೆ ನಾವು ಅದನ್ನು 24ಪೈಸೆಮಾಡಿದೆವು. ಮೂರು ಪೈಸೆ ರಿವೈಸ್ ಮಾಡಿದೆವು. ಪರ್‌ಸೆಂಟೇಜ್ ಆಫ್ ಇನ್‌ಕ್ರೀಸ್ 14.29 ಪರ್‌ಸೆಂಟ್. 14.29ರಂತೆ ಅಡಿಷನಲ್ ರೆವಿನ್ಯೂ ಬಗ್ಗೆ ಹೇಳುವುದಾದರೆ, ಹಾಲಿ ಇದ್ದ ಕಿಲೋಮೀಟರ್‌ಗೆ21ಪೈಸೆಯನ್ನು ನಾವು 24 ಪೈಸೆಗೆ ಜಾಸ್ತಿ ಮಾಡಿದೆವು . ಅಂದರೆ ಮೂರು ಪೈಸೆ ಜಾಸ್ತಿಯಾಯಿತು. 24 ಪೈಸೆ ಮತ್ತು 21 ಪೈಸೆಗಳ ಪರ್‌ಸೆಂಟೇಜ್ 14.29ನಮ್ಮ ಎಲ್ಲಾ ಸಂಸ್ಥೆಗಳಿಂದ ಬೆಲೆಯನ್ನು 15.3 ಪರ್‌ಸೆಂಟ್ ರಿವೈಸ್ ಮಾಡಿದಾಗ 13.2 ಪರ್‌ಸೆಂಟ್‌ನಷ್ಟು ಆದಾಯ ಕೆಎಸ್‌ಆರ್‌ಟಿಸಿ ಯಿಂದ ಬಂದಿದೆ. ಎನ್.ಡಬ್ಲ್ಯೂ.ಕೆ.ಎಸ್.ಆರ್.ಟಿ.ಸಿ ಯಲ್ಲಿ 15.3ಕ್ಕೇ 15.9 ಬಂದಿದೆ . ಬಿ.ಎಂ.ಟಿ.ಸಿ.ಯಲ್ಲಿ 19ಪರ್‌ಸೆಂಟ್ ಹೆಚ್ಚು ಮಾಡಿದ್ದೆವು ಆದಾಯ 20 ಪರ್‌ಸೆಂಟ್ ಬಂದಿದೆ. This is the realisation, for your kind information. ಎರಡನೆಯ ಪ್ರಶ್ನೆಯ ಬಗ್ಗೆ ಹೇಳುವುದಾದರೆ, ಡೀಸಲ್ ಬೆಲೆ ಹೆಚ್ಚಾದಾಗ ಪ್ರಯಾಣದ ದರವನ್ನು ಹೆಚ್ಚು ಮಾಡುವುದು ಸಹಜ. ತಮಗೆ ತಿಳಿದಿರುವಂತೆ ನಮ್ಮ ಸಂಸ್ಥೆಯಿಂದ ಆದಾಯವನ್ನು ತಂದು ಸರ್ಕಾರಕ್ಕೆ ತುಂಬಬೇಕು ಎಂಬ ಉದ್ದೇಶ ನಮಗೆ ಇಲ್ಲ. ಡೀಸೆಲ್ ಬೆಲೆ ಜಾಸ್ತಿಯಾದಾಗ ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ. ಕೆ.ಎಸ್.ಆರ್.ಟಿ.ಸಿ ನಷ್ಟವನ್ನು ಅನುಭವಿಸುತ್ತಿರುವ ಬಗ್ಗೆ ಮಾಹಿತಿಸಾರಿಗೆ ಸಚಿವರಿಗೆ ತಿಳಿದಿರುವ ವಿಚಾರ. ಒಂದು ಕಡೆ ಸಂಭಾವನೆ ವಿಚಾರದಲ್ಲಿ ನಷ್ಟವನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿ ಮತ್ತೊಂದು ಕಡೆ ಡೀಸೆಲ್ ಬೆಲೆ

ಜಾಸ್ತಿಯಾದಾಗ ಅದಕ್ಕೆ ತಕ್ಕಂತೆ ಸಾರಿಗೆ ದರವನ್ನು ಹೆಚ್ಚು ಮಾಡಿದಿದ್ದಾಗ ಕೋಟ್ಯಂತರ ರೂಪಾಯಿ ಸಾರಿಗೆ ಸಂಸ್ಥೆಗೆ ನಷ್ಟವಾಗುವ ಸಂಭವವಿರುತ್ತದೆ. ಸಂದರ್ಭಕ್ಕೆ ಅನುಗುಣವಾಗಿ ಸರ್ಕಾರ ದರ ಏರಿಕೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರು ಮಾನ್ಯ ಸಚಿವರು ಹೊಟ್ಟಿರುವ ಉತ್ತರವನ್ನು ನೋಡಿದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ 25 ಕೋಟಿ 81 ಲಕ್ಷ ರೂಪಾಯಿಗಳ ಉತ್ಪನ್ನ ಬಂದಿದೆ. ಪಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ 14 ಕೋಟಿ 10 ಲಕ್ಷ ರೂಪಾಯಿಗಳ ಹೆಚ್ಚಳ ಉತ್ಪನ್ನ ಬಂದಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಮೂರು ಭಾಗವಿದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಅದರಲ್ಲಿ ಒಂದು ಭಾಗವಾಗಿದೆ. ಆ ಒಂದು ಭಾಗದಲ್ಲಿ 14 ಕೋಟಿ ರೂಪಾಯಿಗಳ ಹೆಚ್ಚು ಆದಾಯ ಬಂದಿದ್ದರೆ ಈ ಭಾಗದಲ್ಲಿ ಅದಕ್ಕಿಂತ ಹೆಚ್ಚು ಆದಾಯ ಬರಬೇಕಾಗಿತ್ತು. ಆದ್ದರಿಂದ, ಈ ಭಾಗದಲ್ಲಿ ಆದಾಯ ಕಡಿಮೆ ಬಂದಿದೆ. ಆ ರೀತಿ ಕಡಿಮೆ ಬರಲು ಕಾರಣವೇನು? ಇಲ್ಲಿ ಸೋರಿಕೆಯಾಗುತ್ತದೆ ಎಂಬ ಅನುಮಾನ ಬರುತ್ತದೆ. ಈ ಸೋರಿಕೆಯನ್ನು ತಡೆಗಟ್ಟಲು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ದಯಮಾಡಿ ಹೇಳಬೇಕು.

ಶ್ರೀ .ಸಿ. ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಎಸ್. ಎಸ್. ಪಾಟೀಲ್ ರವರಿಗೆ ಉತ್ತರಿಸುವುದಾದರೆ, ಮಾನ್ಯ ಸಿಂಧ್ಯರವರು ಕೇಳಿರುವ ಪ್ರಶ್ನೆಯೇನೆಂದರೆ, ನಾವು ಬಸ್ಸಿನದರ ಗಳನ್ನು ಹೆಚ್ಚಿಸಿದ್ದು, ಈ ಹಿನ್ನೆಲೆಯಲ್ಲಿ ಮೂರು ನಿಗಮಗಳಿಂದ ಎಷ್ಟು ಹಣ ಸಂಗ್ರಹವಾಗಿದೆಯೆಂದು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿಯೇ ಏಕ ಹೆಚ್ಚಿಗೆ ಹಣ ಸಂಗ್ರಹವಾಗಿದೆಯೆಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿಯೇ ಏಕ ಹೆಚ್ಚಿಗೆ ಹಣ ಸಂಗ್ರಹವಾಗಿದೆಯೆಂದರೆ ಈ ಸಂಸ್ಥೆ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಹೊಂದಿರುವುದೇ ಆಗಿದೆ. ಇದಕ್ಕಿಂತಲೂ ಕಡಿಮೆ ಸಂಖ್ಯೆಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬಸ್ಸುಗಳನ್ನು ಹೊಂದಿದೆ. ಆದುದರಿಂದ, ಡೀಸೆಲ್ ಬೆಲೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಯಾವ್ಯಾವ ಸಂಸ್ಥೆಗಳ ಬಸ್ಸುಗಳ ದರ ಎಷ್ಟೆಷ್ಟಾಗಿದೆ, ಮತ್ತು ಎಷ್ಟೆಷ್ಟು ಆದಾಯ ಬಂದಿದೆ ಎಂಬುದರ ವಿವರಗಳನ್ನು ಕೊಟ್ಟಿದ್ದೇನೆಯೇ ವಿನಾಹ ಆದಾಯವೇ ಉತ್ತರವಲ್ಲವೆಂಬುದನ್ನು ತಮಗೆ ಹೇಳುತ್ತಿದ್ದೇನೆ.

ಉತ್ತರ ಕನ್ನಡ ಸೀ - ಬರ್ಡ್ ನೌಕಾನೆಲೆ

145(1367) ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ ಅಂಕೋಲಾ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕನ್ನಡ ಸೀಬರ್ಡ್ ನೌಕಾನೆಲೆಯಲ್ಲಿ ಭೂಮಿ ಮನೆ ಕಳೆದುಕೊಂಡ ನಿರಾಶ್ರಿತರು ಎಷ್ಟು? ಎಷ್ಟು ಭೂಮಿ ಮನೆ ಕಳೆದುಕೊಂಡಿದ್ದಾರೆ;

ಆ) ಭೂಮಿ ಮನೆ ಕಳೆದುಕೊಂಡ ನಿರಾಶ್ರಿತರಿಗೆ ಪರಿಹಾರ ಎಷ್ಟು ನೀಡಲಾಗಿದೆ;

ಇ) ಇನ್ನೂ ಕೊಡಬೇಕಾದ ಪರಿಹಾರವೆಷ್ಟು ಯಾವಾಗ ನೀಡಲಾಗುವುದು;

ಈ) ಪುನರ್ವಸತಿ ಪ್ರದೇಶಕ್ಕೆ ಸೌಲಭ್ಯ ಏನು ನೀಡಲಾಗಿದೆ?